

# ಮಟ್ಟಿಹಾಳರ ಕಾವ್ಯ: ಸೃಷ್ಟಿ-ದೃಷ್ಟಿ



ಸಂಪಾದಕರು:
- ಡಾ. ಗುರುಪಾದ ಮರಿಗುದ್ದಿ
- ಡಾ. ಶ್ರೀಪಾದ ಶೆಟ್ಟಿ

Scanned with OKEN Scanner

ನಿಜಲಿಂಗಪ್ಪ ಮಟ್ಟಿಹಾಳರ ಕಾವ್ಯಕ್ಕೆ ಜೀವನಾನುಭವದ ಹರವು ಇದೆ. ಬದುಕನ್ನು ಇತ್ಯಾತ್ಮಕ ದೃಷ್ಟಿಯಿಂದ ನೋಡುವ ಬಗೆಯಿಂದಾಗಿ ಈ ಅನುಭವಕ್ಕೆ ಒಂದು ಜಾಜ್ವಲ್ಯಮಾನತೆ ಇವರ ಕಾವ್ಯದಲ್ಲಿ ರೂಪುಗೊಂಡಿದೆ.

ಮಟ್ಟಿಹಾಳ ಅವರಿಗೆ ಇರುವ ಜೀವನದ ಬಗೆಗಿನ ಇತ್ಯಾತ್ಮಕ ದೃಷ್ಟಿಕೋನದಿಂದಾಗಿಯೇ ಅವರು ಕನ್ನಡದ ವಿಭಿನ್ನ ಕಾವ್ಯಭಾಷೆಯ ಅಭಿವ್ಯಕ್ತಿ ಮತ್ತು ಧೋರಣೆಗಳನ್ನು ಒಂದು ಸಮಗ್ರ ದೃಷ್ಟಿಕೋನದಿಂದ ಗ್ರಹಿಸುವ ಶಕ್ತಿಯನ್ನು ಗಳಿಸಿಕೊಂಡಿದ್ದಾರೆ. ಆಧುನಿಕ ಕನ್ನಡ ಕಾವ್ಯದ ವಿಭಿನ್ನ ಭಾಷಾ ಲಯಗಳು ಇವರ ಕಾವ್ಯದಲ್ಲಿ ವೈರುಧ್ಯವಿಲ್ಲದೆ, ಸಹಜವಾಗಿ ಅರಳಿಕೊಂಡಿದ್ದು, ಅವು ತಮ್ಮದೇ ಆದ ವಿಶಿಷ್ಟತೆಯನ್ನು ರೂಪಿಸಿವೆ. ಉದಾಹರಣೆಗಾಗಿ: ಇವರ ಕಾವ್ಯದಲ್ಲಿ ಬಂಡಾಯದ ಉತ್ಕರ್ಷತೆ ಇದೆಯಾದರು, ಅದು ಜೀವನವನ್ನು ಕಟ್ಟುವ ಪ್ರೀತಿಯ ಲಯಕ್ಕಾಗಿ ಹಾತೊರೆಯುತ್ತದೆ. ಇವರ ಹಲವು ಕವನಗಳಲ್ಲಿ ನವೋದಯದ ಲಯ ಕಂಡುಬರುವುದನ್ನು ಓದುಗರು ಗುರುತಿಸಬಹುದು. ಆದರೆ ಈ ಲಯವು ತನ್ನ ಸಮುದಾಯ ಪ್ರಜ್ಞೆಯ ಆವಿಷ್ಕಾರದಿಂದಾಗಿ ವ್ಯಕ್ತಿ ವಿಶಿಷ್ಟ ಪರಿಮಿತಿಯನ್ನು ದಾಟುತ್ತದೆ. ಭಾವೋದ್ವೇಗದ ಲಯಕ್ಕೆ ಇಲ್ಲಿ ಕಡಿವಾಣ ಬೀಳುವುದರಿಂದ ನವೋದಯದ ಕಾವ್ಯ ಭಾಷೆಯ ಮಿತಿಯನ್ನೂ ಇದು ದಾಟುತ್ತದೆ.

ಮಟ್ಟಿಹಾಳರ ಕಾವ್ಯವು ಆಧುನಿಕ ಕನ್ನಡ ಕಾವ್ಯ ಪರಂಪರೆಯ ಸತ್ವವನ್ನು ಮೈಗೂಡಿಸಿಕೊಂಡಿದ್ದು, ತನ್ನದೇ ಆದ ತಾತ್ವಿಕತೆ ಮತ್ತು ಕಾವ್ಯಲಯ ಕಟ್ಟುವುದರ ಕಡೆಗೆ ತೀವ್ರ ಪ್ರಯತ್ನ ಮಾಡುವುದನ್ನು ಇವರ ಬಹುಪಾಲು ಕವನಗಳಲ್ಲಿ ಗುರುತಿಸಬಹುದು. ಈ ದೃಷ್ಟಿಯಿಂದ ಇವರ ಕಾವ್ಯಭಾಷೆಯಲ್ಲಿ ಹೊಸ ಲವಲವಿಕೆ ಕಾಣುತ್ತದೆ. ಮಟ್ಟಿಹಾಳರ ಸೃಜನಶೀಲ ವ್ಯಕ್ತಿತ್ವ ಇಲ್ಲಿ ತಾನೇ ತಾನಾಗಿ ಅರಳಿಕೊಂಡಿದೆ. ಆಧುನಿಕ ಕನ್ನಡ ಕಾವ್ಯಧಾರೆಯ ಹಲವು ಸ್ವರಗಳಲ್ಲಿ ಮಟ್ಟಿಹಾಳರದ್ದು ಕೇಳುವಂತೆ ಇರುವ ವಿಶಿಷ್ಟ ಧ್ವನಿ.

◆ ಬಸವರಾಜ ಕಲ್ಗುಡಿ

ISBN 978-81-964963-6-4

9 788196 496364

ಅನು ಪ್ರಕಾಶನ
ಮೈಸೂರು

Scanned with OKEN Scanner

# ಮಟ್ಟಿಹಾಳರ ಕಾವ್ಯ:
# ಸೃಷ್ಟಿ-ದೃಷ್ಟಿ

ಸಂಪಾದಕರು:
ಡಾ. ಗುರುಪಾದ ಮರಿಗುದ್ದಿ
ಡಾ. ಶ್ರೀಪಾದ ಶೆಟ್ಟಿ

ಅನು ಪ್ರಕಾಶನ
# 59, 9ನೇ ತಿರುವು, ಸುಬ್ರಮಣ್ಯ ನಗರ
ಹೆಬ್ಬಾಳ್ 3ನೇ ಹಂತ
ಮೈಸೂರು – 570 017

Scanned with OKEN Scanner

# Mattihalara Kavya : Srishti - Drishti

Edited by :

**Dr. Gurupad Mariguddi**

`Kavishila', Mahadev Nagar

Sankeshwar-591314

Ph. : 9449465617

**Dr. Shreepad Shetty**

'Sunada', Prabhat Nagar, Honnavar (U.K) 581334

Ph.: 7975935393

Published by :

**Anu Prakashana**

# 59, 9th Cross, Subramanya Nagara

Hebbal 3rd Stage, Mysore - 570 017

ISBN : 978-81-964963-6-4

Pages : xiv + 250 + 4 = 268

First Impression : 2023

© : Author

Copies : 600

Price : Rs.335-00

Used Paper : Maplito

ಪುಟಗಳು : xiv + ೨೫೦ + ೪ = ೨೬೮

ಮೊದಲ ಮುದ್ರಣ : ೨೦೨೩

ಪ್ರತಿಗಳು : ೬೦೦

© : ಲೇಖಕರದು

ಬೆಲೆ : ರೂ.೩೩೫-೦೦

ಮುಖಪುಟ ವಿನ್ಯಾಸ : ಕೆ.ಕೆ. ಮಕಾಳಿ, ಹಂಪಿ

ಅಕ್ಷರ ಜೋಡಣೆ : ಉನ್ನತಿ ಗ್ರಾಫಿಕ್ಸ್, ಮೈಸೂರು

ಮುದ್ರಣ : ಪ್ರಿಂಟ್ ಕಲ್ಚರ್, ಮೈಸೂರು

Scanned with OKEN Scanner

೧೧. ಎಲ್ಲರವ್ವ : ಮಾನವೀಯ ಕಥನ 56
– ಡಾ. ಮಹಾನಂದಾ ಪಾಟೀಲ

೧೨. ನನ್ನವ್ವ ಯಲ್ಲವ್ವ ಎಲ್ಲರವ್ವ– ಕವಿತೆ ಕುರಿತು 61
– ಡಾ. ವಿನಯಾ ಒಕ್ಕುಂದ

೧೩. ಕವಿಕಾವ್ಯದ ಪ್ರೀತಿಗೊಂದು ಭಾವಗೀತೆ 65
– ಡಾ. ಅಶೋಕ ನರೋಡೆ

೧೪. ಬಸವಿ ದನಗಳು ಕವಿತೆಯ ವಿಶ್ಲೇಷಣೆ 70
– ಡಾ. ಸೀ.ಚ. ಯತೀಶ್ವರ

೧೫. 'ಮುಟ್ಟುವ ಮಜಕೂರ' ಚೆನ್ನನ ಮಾದರಿ 75
– ಡಾ. ಶಿವಾನಂದ ಕೆಳಗಿನಮನಿ

೧೬. ಯೋಧರಿಗೆ ಶರಣು 83
– ಡಾ. ಶ್ರೀಪಾದ ಶೆಟ್ಟಿ

೧೭. ಮುಂಗಾರು ಮಳೆ : ಅವಲೋಕನ 88
– ಡಾ. ಶ್ರೀಧರ ಹೆಗಡೆ ಭದ್ರನ್

೧೮. ಇತಿಹಾಸ ಮೆಲುಕಿನ 'ಕಲ್ಯಾಣದ ಹಾದಿ' 94
– ಡಾ. ಸಂಗಮೇಶ ಎಸ್. ಗಣಿ

೧೯. 'ಕಲ್ಯಾಣದ ಹಾದಿ' ಸಮಗ್ರ ವಿಕಾಸದ ರಾಜಮಾರ್ಗ 99
– ಪ್ರೊ. ಬಸವರಾಜ ಒಕ್ಕುಂದ

೨೦. ಕವಿಯ ಕಣ್ಣಿನಲ್ಲಿ 'ಜಗಜೀವನ್ ರಾಮ್' 110
– ಪ್ರೊ. ಟಿ.ಡಿ. ರಾಜಣ್ಣ ತಗ್ಗಿ

೨೧. 'ಮಹಿಳೆಯದೆ ಮೇಲುಗೈ' – ಸ್ತ್ರೀತ್ವದ ಹೊಸ ಎಚ್ಚರ 119
– ಡಾ. ಶುಭಾ ಮರವಂತೆ

೨೨. ಭೀಮಾವತಾರ ಕವಿತೆಯ ವಿಶ್ಲೇಷಣೆ 127
– ಡಾ. ನವೀನ ಮಂಡಗದ್ದೆ

೨೩. ಮಾತಂಗಿಯ ಮಗನ ಅಳಲು–ಏರುಪೇರುಗಳ ಸಮಗೊಳಿಸುವ ಕನಸು 135
– ಡಾ. ಎಂ.ಡಿ. ಒಕ್ಕುಂದ



Scanned with OKEN Scanner

BASAVARAJ OKKUNDA

# ‘ಕಲ್ಯಾಣದ ಹಾದಿ’ ಸಮಗ್ರ ವಿಕಾಸದ ರಾಜಮಾರ್ಗ

– ಪ್ರೊ. ಬಸವರಾಜ ಒಕ್ಕುಂದ

ಕವಿಯಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ, ವಾಗ್ಮಿಯಾಗಿ, ಪ್ರಾಧ್ಯಾಪಕರಾಗಿ, ಸಮರ್ಥ ಆಡಳಿತಗಾರರಾಗಿ ಇವೆಲ್ಲವುಗಳಿಗೆ ಮೀರಿ ಸ್ನೇಹಜೀವಿಯಾಗಿ ಡಾ. ನಿಜಲಿಂಗಪ್ಪ ಮಟ್ಟಿಹಾಳರು ಸಾಹಿತ್ಯಕ ವಲಯದಲ್ಲಿ ಪರಿಚಿತರು. ಅವರ ಬಹುಮುಖೀ ವ್ಯಕ್ತಿತ್ವದ ಸೃಜನಶೀಲತೆ–ಕ್ರಿಯಾಶೀಲತೆಗಳ ಹಿಂದೆ ಕವಿಯ ಅಂತಃಕರಣ ಪ್ರಧಾನವಾಗಿದೆ. ಅವರ ಅಂತಃಕರಣದ ಮಿಡಿತದೊಳಗೆ ಸ್ವಂತ ಬದುಕಿನಲ್ಲಿ ಅನುಭವಿಸಿದ ನೋವಿನ ಸೆಲೆಗಳಿವೆ; ಕೊಸರಿಕೊಂಡು ಮೇಲೆದ್ದು ನಿಲ್ಲುವ ಹೋರಾಟದ ಛಲಗಳಿವೆ. ಅವರ ‘ಒಂದು ಕಾಳಿನ ಕಥೆ’ಯಂತಹ ರಚನೆಗಳು ರೂಪಕವಾಗಿ ಕವಿಯ ಬದುಕಿಗೆ ಕನ್ನಡಿ ಹಿಡಿಯುವುದು ಗಮನಾರ್ಹ. ಆ ಕವಿತೆಯ ಒಂದು ನುಡಿ ಹೀಗಿದೆ –

ಮಣ್ಣಿನಲ್ಲಿ ಹೂತರೆಂಬ<br>
ಹಳಹಳಿ ನನಗಿಲ್ಲ<br>
ನೆಲದ ನೆತ್ತಿ ಸೀಳಿ ಬೆಳೆದು<br>
ಹಾಲ್ದೆನೆ ಹೊತ್ತು ನಿಂತೆ

ಸ್ವಾನುಭವದ ಬೇರುಗಳಿರುವ ವ್ಯಕ್ತಿತ್ವ ಮಾತ್ರ ಇಂಥ ಸಾಲುಗಳನ್ನು ಬರೆಯಲು ಸಾಧ್ಯ. ಯಾರೊಂದಿಗೆ ಹೋರಾಡುತ್ತಿರುವೆವೋ ಅವರನ್ನು ವೈರಿಗಳಾಗಿ ದ್ವೇಷಿಸದೆ ಜತೆಗೆ ಕರೆದೊಯ್ಯುವ ಪ್ರೀತಿ ಬುದ್ಧ, ಬಸವ, ಗಾಂಧಿ, ಅಂಬೇಡ್ಕರರಂತಹ ಮಹಾನುಭಾವರಲ್ಲಿ ಪ್ರಕಟಗೊಂಡು ಲೋಕವನ್ನು ತಬ್ಬಲು ತವಕಿಸುವಂತಹದು. ಅಂತಹ ವಿಶಾಲ ಭೂಮಿಕೆಯ ಎಳೆಗಳು ಮಟ್ಟಿಹಾಳರ ಸಂವೇದನೆಯಲ್ಲಿ ಹಾಸುಹೊಕ್ಕಾಗಿರುವುದರಿಂದ ‘ಕಲ್ಯಾಣದ ಹಾದಿ’ಯಂತಹ ಕವಿತೆಯ ಸೃಷ್ಟಿ ಅವರಿಂದ ಸಾಧ್ಯವಾಗಿದೆ. ಸೈದ್ಧಾಂತಿಕ ಹಾಗೂ ತಾತ್ವಿಕ ಆಸಕ್ತಿಗಳಿಂದ ರೂಪುಗೊಳ್ಳುವ ಬದ್ಧರಚನೆಗಳ ಕೃತಕತೆ ಇಂಥಲ್ಲಿ ಕಾಣದು. ಸ್ವಾನುಭವದ ಬೇರುಗಳಿಂದ ಚಿಗುರೊಡೆದು ಬೆಳೆಯುವ ‘ಹಾಲ್ದೆನೆ’ಗಳ ಕಸುವು–ರಸವಂತಿಕೆಗಳೇ ಬೇರೆ. ಮಟ್ಟಿಹಾಳರ ಹಲವಾರು ರಚನೆಗಳಲ್ಲಿ ಈ ಸತ್ವವನ್ನು ನಾನು ಕಂಡಿದ್ದೇನೆ. ಅವರೊಬ್ಬ ಉಪೇಕ್ಷಿತ ಗಮನಾರ್ಹ



Scanned with OKEN Scanner